
# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಸ್ವಾಮಿ ವೀರೇಶಾನಂದ





ಸ್ವಾಮಿ ವಿವೇಕಾನಂದರು ಅಮೆರಿಕ ಮುಂತಾದ ಪಾಶ್ಚಾತ್ಯದೇಶಗಳಿಗೆ ಹೋಗಿ ಬಂದ ವಿಚಾರ ನಮಗೆಲ್ಲ ಗೊತ್ತೇ ಇದೆ. ಆದರೆ ಅದರ ಬಗ್ಗೆ ವಿಶೇಷವಾಗಿ ಸಂಶೋಧನೆ ಮಾಡಿ, ಅನೇಕ ನೂತನ ಆವಿಷ್ಕಾರಗಳನ್ನು ಮಾಡಿದವರು ಯಾರು ಗೊತ್ತೆ? ಅವರೇ ಮೇರಿ ಲೂಯಿಸ್ ಬರ್ಕ್. ಇವರು ಸ್ಯಾನ್‌ಫ್ರಾನ್‌ಸಿಸ್ಕೋ ಮಹಾನಗರದಲ್ಲಿ ಇರುವ ವೇದಾಂತ ಸೊಸೈಟಿಯ ಭಕ್ತರಾಗಿದ್ದರು; ಪ್ರಖ್ಯಾತರಾದ ಸ್ವಾಮಿ ಅಶೋಕಾನಂದರ ಶಿಷ್ಯೆಯಾಗಿದ್ದರು. ಸ್ವಾಮಿಗಳೇ ಇವರಿಗೆ ಈ ಸಂಶೋಧನೆಯನ್ನು ಕೈಗೊಳ್ಳುವಂತೆ ಉತ್ತೇಜನ ನೀಡಿದರು. ಈ ಸಂಶೋ ಧನೆಯ ಫಲವಾಗಿ Swami Vivekananda in the West - New Discoveries ಎಂಬ ಇವರ ಉದ್ಗ್ರಂಥದ ಮೊದಲನೆಯ ಸಂಪುಟ ೧೯೫೮ರಲ್ಲಿ ಹೊರಬಂದಿತು. ಈ ಗ್ರಂಥವು ಇದುವರೆಗೆ ನಾಲ್ಕು ಪರಿಷ್ಕೃತ ಆವೃತ್ತಿಗಳನ್ನು ಕಂಡಿದೆ.

ಮೇರಿ ಲೂಯಿಸ್ ಬರ್ಕ್ ಅವರು ಈ ಸಂಶೋಧನೆಯನ್ನು ಆರಂಭಿಸಿದ್ದಾದರೂ ಏಕೆ? ಇದನ್ನು ಮೊದಲನೆಯ ಆವೃತ್ತಿಯ ತಮ್ಮ ಮುನ್ನುಡಿಯಲ್ಲಿ ಅವರೇ ಹೀಗೆ ಬರೆದಿದ್ದಾರೆ: ''೧೯೫೦ರ ವಸಂತಕಾಲದಲ್ಲಿ ನಾನು ನ್ಯೂಯಾರ್ಕ್ ನಗರದ ಬ್ರೂಕ್ಲಿನ್‌ನಲ್ಲಿ ಹಾಗೂ ಬೋಸ್ಟನ್ ನಗರದ ಗ್ರಂಥಾಲಯಗಳಲ್ಲಿ ಹಳೆಯ ವೃತ್ತಪತ್ರಿಕೆಗಳನ್ನು ತಿರುವಿ ನೋಡುತ್ತಿದ್ದೆ. ಸ್ವಾಮಿ ವಿವೇಕಾನಂದರ ಬಗ್ಗೆ ಹೆಚ್ಚಿನ ಮಾಹಿತಿ ನೀಡುವ ಲೇಖನಗಳು ಇವೆಯೇ ಎಂದು ನಾನು ಹುಡುಕುತ್ತಿದ್ದೆ. ಈ ನನ್ನ ಅನ್ವೇಷಣೆ ಸ್ವಾಮಿ ವಿವೇಕಾನಂದರ ಅಮೆರಿಕದ ವಾಸ್ತವ್ಯದ ಬಗ್ಗೆ ಒಂದು ಗ್ರಂಥ ಬರೆಯುವಷ್ಟು ಮಟ್ಟಿಗೆ ಫಲಿಸುತ್ತದೆ ಎಂದು ನಾನು ಕನಸಿನಲ್ಲಿಯೂ ಯೋಚಿಸಿರಲಿಲ್ಲ.'' ಹೀಗೆ ಆರಂಭವಾಯಿತು ಮೇರಿ ಲೂಯಿಸ್ ಬರ್ಕ್ ಅವರ ಸಂಶೋಧನೆ. ಅವರು ಇದರಲ್ಲಿ ತಮ್ಮನ್ನು ಹೆಚ್ಚು ಹೆಚ್ಚು ತೊಡಗಿಸಿಕೊಂಡಷ್ಟೂ ಹೆಚ್ಚು ಹೆಚ್ಚು ವಿಷಯಗಳು ಅವರಿಗೆ ಲಭ್ಯವಾದುವು. ಸ್ವಾಮಿ ವಿವೇಕಾನಂದರ ಅಮೆರಿಕದ ದಿನಗಳ ಬಗ್ಗೆ ಹೊಸ ಹೊಸ ಮಾಹಿತಿಗಳು ಅಗಾಧವಾದ ರೀತಿಯಲ್ಲಿ ದೊರಕುತ್ತ ಹೋದವು. ಕಡೆಗೆ ಆರು ಸಂಪುಟಗಳಷ್ಟು ಬಹು ದೊಡ್ಡ ಗ್ರಂಥ ರಚಿತವಾಯಿತು. ಈ ಗ್ರಂಥದಲ್ಲಿರುವ ಅದ್ಭುತ ಕಥಾನಕದ ಕೆಲವು ಮಿಂಚುನೋಟಗಳನ್ನು ಮುಂದಿಡುವ ಪ್ರಯತ್ನವೇ ಈ ಲೇಖನಮಾಲೆ. ಲೇಖಕರು 'ವಿವೇಕಪ್ರಭ'ದ ಹಿಂದಿನ ಸಂಪಾದಕರು; ಉತ್ತಮ ವಾಗ್ಮಿಗಳೂ, ಶಾಸ್ತ್ರ- ಸಾಹಿತ್ಯಗಳಲ್ಲಿ ಪಾರಂಗತರೂ, ಉತ್ತಮ ಲೇಖಕರೂ ಆಗಿರುವ ಅವರು ಪ್ರಸ್ತುತ ರಾಮಕೃಷ್ಣ ಮಹಾಸಂಘದ ಆಂಗ್ಲ ಮಾಸಪತ್ರಿಕೆ 'ಪ್ರಬುದ್ಧ ಭಾರತ'ದ

## ಭಾಗ ೧

### ಶಿಕಾಗೋದೆಡೆಗೆ ಸ್ವಾಮಿ ವಿವೇಕಾನಂದರು

ಶಿಕಾಗೋದಲ್ಲಿ ನಡೆಯಲಿರುವ ವಿಶ್ವಧರ್ಮ ಸಮ್ಮೇಳನದ ಬಗ್ಗೆ ಸ್ವಾಮಿ ವಿವೇಕಾನಂದರು ಮೊದಲು ಕೇಳಿದ್ದು ೧೮೯೨ರ ಮೊದಲ ಭಾಗದಲ್ಲಿ. ಅವರ ಸ್ನೇಹಿತರು ಮತ್ತು ಅನುಯಾಯಿಗಳು ೧೮೯೩ರ ಸೆಪ್ಟೆಂಬರ್ ತಿಂಗಳು ನಡೆಯಲಿರುವ ಈ ಸಮ್ಮೇಳನದಲ್ಲಿ ಹಿಂದೂ ಧರ್ಮವನ್ನು ಪ್ರತಿನಿಧಿಸುವಂತೆ ಸ್ವಾಮೀಜಿಯವರನ್ನು ಒತ್ತಾಯಿಸಿದರು; ಅವರ ಪ್ರಯಾಣದ ಖರ್ಚು ಮತ್ತು ಇತರೆ ವೆಚ್ಚಗಳನ್ನು ತಾವು ಭರಿಸುತ್ತೇವೆಂದು ಮಾತು ಕೊಟ್ಟರು. ಅದನ್ನು ನೆರವೇರಿಸಿದರು ಕೂಡ. ಇದಲ್ಲದೆ ತಾವು ಅಮೆರಿಕಾಗೆ ಹೋಗಬೇಕು ಎನ್ನುವ ಅಂತರಂಗದ ಕರೆಯನ್ನು ಸ್ವಾಮೀಜಿ ಕೂಡ ಅನುಭವಿಸಿದರು. ಇಷ್ಟಾದರೂ ೧೮೯೩ರ ಏಪ್ರಿಲ್ ತಿಂಗಳಿನ ತನಕ ಈ ಬಗ್ಗೆ ನಿಶ್ಚಿತವಾಗಿ ಯಾವ ನಿರ್ಧಾರವನ್ನೂ ಅವರು ಕೈಗೊಂಡಿರಲಿಲ್ಲ. ಮಾರ್ಗದರ್ಶನಕ್ಕಾಗಿ ಅವರು ಭಗವಂತನನ್ನು ಪ್ರಾರ್ಥಿಸಿದರು. ಕಡೆಗೆ ಅವರೇ ಮುಂದೆ ಹೇಳಿಕೊಂಡಂತೆ, 'ದಿವ್ಯ ಆಜ್ಞೆ'ಯು ಅವರಿಗೆ ಲಭಿಸಿತು. ಭಗವಂತನೇ ಈ ಪಯಣಕ್ಕಾಗಿ ಅನುಮತಿಯನ್ನು ನೀಡಿದ್ದಾನೆ ಎಂದು ಉತ್ಸಾಹಭರಿತರಾದರು ಸ್ವಾಮೀಜಿ. ಶ್ರೀರಾಮಕೃಷ್ಣರೇ ಅವರ ಬಗ್ಗೆ ಹಿಂದೊಮ್ಮೆ ಹೀಗೆ ಹೇಳಿದ್ದರು: ''ನರೇಂದ್ರ ತನ್ನ ಬೌದ್ಧಿಕ ಮತ್ತು ಆಧ್ಯಾತ್ಮಿಕ ಶಕ್ತಿಗಳ ಮೂಲಕ ಜಗತ್ತನ್ನೇ ಅಲುಗಾಡಿಸಿಬಿಡುವ ಸಮಯ ಬರುತ್ತದೆ.'' ಆ ಸಂದರ್ಭ ಈಗ ಪ್ರಾಪ್ತವಾಯಿತು. ಸ್ವಾಮಿ ವಿವೇಕಾನಂದರು ತಮಗೆ ಪ್ರಿಯರಾದ ಸ್ನೇಹಿತರನ್ನು ಬೀಳ್ಕೊಂಡು ಮೇ ೩೧, ೧೮೯೩ರಂದು ಮುಂಬೈನಿಂದ ಅಮೆರಿಕಾಗೆ ಪ್ರಯಾಣ ಬೆಳೆಸಿದರು. ಚೀನಾ ಮತ್ತು ಜಪಾನ್ ದೇಶಗಳಲ್ಲಿ ಸ್ವಲ್ಪಕಾಲ ತಂಗಿ, ಯೊಕೊಹೋಮಾ ತಲುಪಿದರು. ಅಲ್ಲಿಂದ ಜುಲೈ ೧೪, ೧೮೯೩ರಂದು S S.



S S. Empress of India ಹಡಗು

Empress of India ಎಂಬ ಹಡಗಿನಲ್ಲಿ ಕೆನಡಾದ ವ್ಯಾಂಕೋವರ್ ನಗರಕ್ಕೆ ಪಯಣಿಸಿದರು.

ಅಂದು ಮಂಗಳವಾರ; ಜುಲೈ ೨೫, ೧೮೯೩. ೬೦೦ ಟನ್ ತೂಕದ ಬೃಹದ್ ಹಡಗು ವ್ಯಾಂಕೋವರ್ ಬಂದರಿನಲ್ಲಿ ಸಂಜೆ ಏಳು ಗಂಟೆಯ ಸುಮಾರಿಗೆ ಲಂಗರು ಹಾಕಿತು. ಅಂದು ರಾತ್ರಿ, ಪ್ರಯಾಣ ಮುಂದುವರೆಸುವ ಪ್ರಯಾಣಿಕರ ಜೊತೆಗೆ, ಸ್ವಾಮಿ ವಿವೇಕಾನಂದರು ಅಲ್ಲಿಯೇ ಉಳಿದುಕೊಳ್ಳಬೇಕಾಯಿತು. ಸ್ವಾಮೀಜಿ ಮರುದಿನ ಬೆಳಗ್ಗೆ ಕೆನಡಿಯನ್ ಪೆಸಿಫಿಕ್ ರೈಲ್ವೇ ಕಂಪನಿಯ 'ಅಟ್ಲಾಂಟಿಕ್ ಎಕ್ಸ್‌ಪ್ರೆಸ್' ಎಂಬ ರೈಲಿನ ಸೆಕೆಂಡ್ ಕ್ಲಾಸ್ ತರಗತಿಯಲ್ಲಿ ದಕ್ಷಿಣ ದಿಕ್ಕಿಗೆ ಪ್ರಯಾಣ ಮಾಡಿ ವಿನಿಪಿಗ್ ಎನ್ನುವ ಸ್ಥಳಕ್ಕೆ ಬಂದಿಳಿದರು. ದಾರಿಯುದ್ದಕ್ಕೂ ಹಿಮಾಚ್ಛಾದಿತ ಪರ್ವತಗಳ ಅಪೂರ್ವ ದೃಶ್ಯ ಕಾಣುತ್ತಿತ್ತು. ಚಿಕ್ಕ ಚಿಕ್ಕ ಪರ್ವತಗಳ ಮೇಲೆಯೂ ಹಿಮ ಬಿದ್ದಿರುತ್ತಿತ್ತು ಎಂದು ಸ್ವಾಮಿ ವಿವೇಕಾನಂದರು ತಮ್ಮ ಒಂದು ಪತ್ರದಲ್ಲಿ ಬರೆಯುತ್ತಾರೆ. ವಿನಿಪಿಗ್ ಅನ್ನು ಶುಕ್ರವಾರ ರಾತ್ರಿ ಅವರು ಸೇರಿದರು. ಅಲ್ಲಿಂದ ಅವರು ಮತ್ತೊಂದು ರೈಲಿನಲ್ಲಿ ಕುಳಿತು, ಶಿಕಾಗೋ ನಗರದತ್ತ ಪ್ರಯಾಣ ಬೆಳೆಸಿದರು. ಮಾರ್ಗದಲ್ಲಿ ಸೈಂಟ್ ಪೌಲ್ ಎಂಬ ಸ್ಥಳದಲ್ಲಿ ಅವರು ಮತ್ತೊಂದು ರೈಲನ್ನೇರಬೇಕಾಯಿತು. ಅಲ್ಲಿಂದ ಈ ಮೂರನೆಯ ರೈಲು, ಸುಮಾರು ೪೦೦ ಮೈಲು ಪೂರ್ವದಿಕ್ಕಿಗೆ ಪ್ರಯಾಣ ಮಾಡಿ, ಕಟ್ಟಕಡೆಗೆ ಶಿಕಾಗೋ ನಗರವನ್ನು ಸೇರಿತು. ಬಹಶಃ ಭಾನುವಾರ, ಜುಲೈ ೩೦, ೧೮೯೩, ರಾತ್ರಿ ೧೧ ಗಂಟೆಯ ಸುಮಾರಿಗೆ ಸ್ವಾಮಿ ವಿವೇಕಾನಂದರು ಶಿಕಾಗೋ ನಗರವನ್ನು ಪ್ರಥಮಬಾರಿಗೆ ತಲುಪಿದರು.

ಸ್ವಾಮಿ ವಿವೇಕಾನಂದರ ಆಗಮನಕ್ಕೂ, ಸರ್ವಧರ್ಮ ಸಮ್ಮೇಳನದ ಆರಂಭಕ್ಕೂ ಆರು ವಾರಗಳ ಅಂತರ ಇದ್ದಿತು. ಈ ಕಾಲಮಾನದಲ್ಲಿ ಸ್ವಾಮೀಜಿ ಏನನ್ನೆಲ್ಲ ಮಾಡಿದರು? ಎಲ್ಲಿಗೆಲ್ಲ ಹೋದರು? — ಈ ವಿಷಯಗಳಿಗೆ ಸಂಬಂಧಿಸಿದ ಹಾಗೆ ಆಕರಗಳು ಎಂದರೆ ಸ್ವಾಮೀಜಿಯವರ ಎರಡು ಪತ್ರಗಳು. ಮೊದಲನೆಯದು ೧೮೯೩ರ ಆಗಸ್ಟ್ ೨೦ರಂದು ಅವರು ಬ್ರೀಜೀ ಮೆಡೋಸ್, ಮಸಾಚುಸೆಟ್ಸ್‌ನಿಂದ ಬರೆದುದು. ಎರಡನೆಯದು, ನವೆಂಬರ್೨ ರಂದು ಶಿಕಾಗೋದಿಂದ ಬರೆದಿರುವುದು. ಇವೆರಡನ್ನೂ ಅವರು ಮದ್ರಾಸಿನ ತಮ್ಮ ಶಿಷ್ಯರಿಗೆ ಬರೆದಿದ್ದಾರೆ. ಆದರೆ ಈ ಎರಡೂ ಪತ್ರಗಳು ಸ್ವಾಮೀಜಿ ಕಳೆದ ಅಂದಿನ ದಿನಗಳ ಬಗ್ಗೆ ಸ್ಪಷ್ಟ ಚಿತ್ರಣವನ್ನು ನಮಗೆ ನೀಡುವುದಿಲ್ಲ. ಇದಕ್ಕಾಗಿ ನಾವು ಹೊಸದಾಗಿ ಸಿಕ್ಕಿರುವ ಆಕರಗಳ ಮೊರೆ ಹೋಗಬೇಕಾಗುತ್ತದೆ.

ಸ್ವಾಮೀಜಿ ತಾವು ಅಮೆರಿಕೆಗೆ ಬಂದಾಗ ತಂದದ್ದು ಅತ್ಯಲ್ಪ ಸಾಮಾನು ಸರಂಜಾಮನ್ನು. ಅದೇ ತಮಗೆ ಬಹು ಮುಜುಗರವನ್ನು ಉಂಟುಮಾಡಿತು ಎಂದು ಅವರು ತಮ್ಮ ಒಂದು ಪತ್ರದಲ್ಲಿ ಬರೆದುಕೊಳ್ಳುತ್ತಾರೆ. ಇದಲ್ಲದೆ ಅವರು ತಂಗುವುದಕ್ಕೆ ಯಾವ ಮುಂಚಿನ ಏರ್ಪಾಡುಗಳನ್ನು ಕೂಡ ಮಾಡಿಕೊಂಡಿರಲಿಲ್ಲ ಎನ್ನುವುದು ಸ್ಪಷ್ಟ. ಸ್ವಾಮೀಜಿ ಅಂದು ಮಗುವಿನಂತೆ, ಪ್ರಾಪಂಚಿಕ ವ್ಯವಹಾರಗಳ ವಿಷಯದಲ್ಲಿ ಮುಗ್ಧ ಮನಸ್ಸುಳ್ಳವರಾಗಿದ್ದರು; ಅವರಿಗೆ ಅಮೆರಿಕೆಯಲ್ಲಿ ಯಾರ ಪರಿಚಯವೂ ಇರಲಿಲ್ಲ; ಅವರನ್ನು ಕುರಿತು ಅಲ್ಲಿ ಯಾರಿಗೂ ಗೊತ್ತಿರಲೂ ಇಲ್ಲ. ಭಗವದ್ಧ್ಯಾನದಲ್ಲಿ ತಲ್ಲೀನರಾಗಿ ಭಾರತದ ಬೀದಿಗಳಲ್ಲಿ



೧೮೯೨ ರಲ್ಲಿ, ತಿರುವನಂತಪುರದಲ್ಲಿ ತೆಗೆದ ಚಿತ್ರ

ಸ್ವಚ್ಛಂದವಾಗಿ ಸಂಚರಿಸುತ್ತಿದ್ದ ಯುವ ಸಂನ್ಯಾಸಿಯೊಬ್ಬ ಗೊತ್ತಿಲ್ಲದ ನಾಡಿಗೆ ಪದಾರ್ಪಣೆ ಮಾಡಿದ್ದಾನೆ; ಶಿಕಾಗೋ ಅಂಥ ಜನಜಂಗುಳಿಯಿಂದ ಕೂಡಿದ ಮಹಾನಗರವನ್ನು ಪ್ರವೇಶಿಸಿದ್ದಾನೆ.

ಶಿಕಾಗೋದ ಜಾಗತಿಕ ಕೊಲಂಬಿಯನ್ ವಸ್ತುಪ್ರದರ್ಶನವು ಈಗಾಗಲೇ ಪ್ರಾರಂಭವಾಗಿ ಮೂರು ತಿಂಗಳು ಕಳೆದಿತ್ತು. ಇದರ ಅಂಗವಾಗಿಯೇ ಸರ್ವಧರ್ಮ ಸಮ್ಮೇಳನ ಆಯೋಜಿತವಾಗಿದ್ದು. ಇದರಲ್ಲಿ ಪ್ರತಿನಿಧಿಯಾಗಿ ಭಾಗವಹಿಸಲು ಪರಿಚಯ ಪತ್ರದ ಆವಶ್ಯಕತೆ ಇತ್ತು. ಸ್ವಾಮಿ ವಿವೇಕಾನಂದರು ಈ ರೀತಿಯ ಯಾವುದೇ ಪರಿಚಯಪತ್ರವನ್ನೂ ಹೊಂದಿರಲಿಲ್ಲ. ಹೀಗಾಗಿ ಸರ್ವಧರ್ಮ ಸಮ್ಮೇಳನದಲ್ಲಿ ಭಾಷಣ ಮಾಡುವ ಅವರ ಆಸೆ ಬಂದೊಡನೆ ಕಮರಿಹೋಯಿತು. ಇದಲ್ಲದೆ, ಇನ್ನಾವುದೇ ರೀತಿಯಲ್ಲಿ ಅಮೆರಿಕೆಯಲ್ಲಿ ಪ್ರವಚನಗಳನ್ನು ಮಾಡುವ ಅವಕಾಶವೂ ಸದ್ಯಕ್ಕೆ ಇರಲಿಲ್ಲ. ಆಗಿನ್ನೂ ಭಾಷಣ ಸಮಾರಂಭಗಳ ಸರಣಿಯ ಕಾಲ ಆರಂಭವಾಗಿರಲಿಲ್ಲ. ಇದಲ್ಲದೆ, ಅಮೆರಿಕಾದಲ್ಲಿ, ಅದರಲ್ಲಿಯೂ ಶಿಕಾಗೋ ನಗರದಲ್ಲಿ, ವಾಸ ಮಾಡುವ ಖರ್ಚು ವಿಪರೀತವಾಗಿತ್ತು. ಪ್ರತಿನಿತ್ಯ ಕೊಠಡಿಯ ಬಾಡಿಗೆ (ಮೂರು ಡಾಲರು) ಸೇರಿ ದಿನಕ್ಕೆ ಐದು ಡಾಲರುಗಳಷ್ಟು ವೆಚ್ಚವಾಗುತ್ತಿತ್ತು. ಅವರಲ್ಲಿದ್ದ ಅಲ್ಪ ಹಣದಲ್ಲಿ ಅಮರಿಕಾದ ಮರಗಟ್ಟುವ ಚಳಿಗಾಲದವರೆಗೆ ವಾಸ್ತವ್ಯ ಹೂಡಲು ಅವರಿಗೆ ಸಾಧ್ಯವಾಗುತ್ತಲೇ ಇರಲಿಲ್ಲ. ಇದಲ್ಲದೆ, ಸ್ವಾಮೀಜಿ ಅಮೆರಿಕೆಗೆ ಬಂದ ಕಾಲಾವಧಿಯಲ್ಲಿ ಜನರು ಆರ್ಥಿಕ ಸಂಕಷ್ಟಗಳ ಬವಣೆಗೆ ಸಿಕ್ಕಿದ್ದರು. ಅನೇಕ ಬ್ಯಾಂಕುಗಳು ಮುಚ್ಚಿದ್ದವು. ಅಮೇರಿಕೆಯ ಜನರು ದಾನಮಾಡುವ ಸ್ಥಿತಿಯಲ್ಲಿ ಇರಲಿಲ್ಲ.

ಇಂಥ ಪರಿಸ್ಥಿತಿಯಲ್ಲಿಯೂ ಸ್ವಾಮೀಜಿ ಒಬ್ಬ ಸ್ನೇಹಿತನನ್ನು ಗಳಿಸಿಕೊಂಡಿದ್ದರು. ಅವರೇ ಶ್ರೀ ಸಿ. ಲಾಲುಭಾಯಿ. ಅವರು S S. Empress of India ಹಡಗಿನಲ್ಲಿ ಸ್ವಾಮೀಜಿಯವರ ಸಹ ಪ್ರಯಾಣಿಕರಾಗಿದ್ದರು. ಇದಲ್ಲದೆ ಸ್ವಾಮೀಜಿ ವರದರಾವ್ ಎನ್ನುವ ಎಂಬ ತಮ್ಮ ಮದ್ರಾಸಿನ ಸ್ನೇಹಿತರಿಂದ ಕೊಲಂಬಿಯಾ ವಸ್ತುಪ್ರದರ್ಶನದ ನಿರ್ದೇಶಕರು ಮತ್ತು ಅವರ ಪತ್ನಿಗೆ ಒಂದು ಪರಿಚಯ ಪತ್ರವನ್ನು ಕೂಡ ತಂದಿದ್ದರು. ಆ ದಂಪತಿಗಳು ಸ್ವಾಮೀಜಿಯವರ ಪ್ರತಿಭೆಯನ್ನು ಶ್ಲಾಘಿಸಿದರು; ಆದರೆ ಅವರೇನೂ ತಮ್ಮ ಮನೆಗೆ ಅತಿಥಿಯಾಗಿ ಬಂದು ಉಳಿದುಕೊಳ್ಳುವಂತೆ ಸ್ವಾಮೀಜಿಯವರನ್ನು ಆಹ್ವಾನಿಸಲಿಲ್ಲ. ಸ್ವಾಮೀಜಿ ತಮ್ಮ ಒಂದು ಪತ್ರದಲ್ಲಿ ಬರೆಯುತ್ತಾರೆ: ''ಅವರು ನನ್ನ ಬಗ್ಗೆ ಅನುಕಂಪವನ್ನು ತೋರಿದರು; ನನ್ನ ಪ್ರಶಂಸೆ ಮಾಡಿದರು. ಆದರೆ ನನ್ನಂಥ ವಿದೇಶೀಯನನ್ನು ಕೇವಲ ಮನರಂಜನೆಗಾಗಿ ಉಪಯೋಗಿಸಿಕೊಂಡರು. ತಮ್ಮ ಜೇಬಿನಿಂದ ನನಗಾಗಿ ಎಳ್ಳಷ್ಟೂ ಖರ್ಚುಮಾಡಲು ಹಿಂಜರಿದರು. ಏಕೆಂದರೆ ಅದು ಅಷ್ಟೊಂದು ಕೆಟ್ಟ ಕಾಲವಾಗಿತ್ತು. ಆ ವರ್ಷ ಎಲ್ಲೆಲ್ಲೂ ಆರ್ಥಿಕವಾಗಿ ವೈಫಲ್ಯಗಳೇ ಜರುಗುತ್ತಿದ್ದವು. ಆದ್ದರಿಂದ ನಾನು ಒಡನೆ ಶಿಕಾಗೋ ನಗರದಿಂದ ಹೊರಬಂದೆನು; ನೇರವಾಗಿ ಬೋಸ್ಟನ್ ನಗರಕ್ಕೆ ಬಂದೆನು.''

ಸ್ವಾಮಿ ವಿವೇಕಾನಂದರು ಶಿಕಾಗೋ ನಗರದಲ್ಲಿ ಕಳೆದದ್ದು ಸುಮಾರು ೧೨ ದಿನಗಳ ಕಾಲ ಮಾತ್ರ. ಆ ಕಾಲಾವಧಿಯಲ್ಲಿ ಅವರು ಪ್ರತಿದಿನವೂ ವಸ್ತುಪ್ರದರ್ಶನವನ್ನು ಸುತ್ತಾಡಿಕೊಂಡು ಬರುತ್ತಿದ್ದರು. ಅದೊಂದು ಬೃಹದ್ ಪ್ರದರ್ಶನವಾಗಿತ್ತು. ಒಂದೆರಡು ದಿನಗಳಲ್ಲಿ ನೋಡಿಮುಗಿಸಲು ಸಾಧ್ಯವಾಗುತ್ತಿರಲಿಲ್ಲ. ಸ್ವಾಮೀಜಿ ಬರೆಯುತ್ತಾರೆ: ಇವನ್ನೆಲ್ಲ ನೋಡಲು ಒಬ್ಬನಿಗೆ ಕನಿಷ್ಠ ಹತ್ತು ದಿನಗಳಾದರೂ ಬೇಕು ಎಂದು. ಆಧುನಿಕ ತಂತ್ರಜ್ಞಾನದ ಅದ್ಭುತಗಳಾದ ಆವಿಯಿಂದ ನಡೆಯುವ ಇಂಜಿನ್, ವಿದ್ಯುಚ್ಛಕ್ತಿಯಿಂದ ನಡೆಯುವ ಹಲವಾರು ಉಪಕರಣಗಳನ್ನು ಅಲ್ಲಿ ಪ್ರದರ್ಶನಕ್ಕೆ ಇಡಲಾಗಿತ್ತು. ಇದಲ್ಲದೆ, ಸ್ವಾಮೀಜಿ, ಸುತ್ತಲಿನ ಜನಕ್ಕೆ ತಾವೇ ಒಬ್ಬ ಅದ್ಭುತ ವ್ಯಕ್ತಿಯಾಗಿ ಪರಿಣಮಿಸಿಬಿಟ್ಟಿದ್ದರು. ಕೆಲವರು ಅವರನ್ನು ನೂಕುತ್ತಿದ್ದರು; ಮತ್ತೆ ಕೆಲವರು ಅವರ ಪೇಟವನ್ನು ಎಳೆದುಹಾಕುತ್ತಿದ್ದರು. ಖಂಡಿತವಾಗಿಯೂ, ಸ್ವಾಮಿ ವಿವೇಕಾನಂದರಿಗೆ ಅಮೆರಿಕೆಯಲ್ಲಿ ಮೊದಮೊದಲು ಹಾರ್ದಿಕವಾದ ಸ್ವಾಗತವೇನೂ ಲಭಿಸಲಿಲ್ಲ! ಇದಲ್ಲದೆ, ಅವರ ಪರಿಚಯ ಮಾಡಿಕೊಂಡ ಶ್ರೀಮಂತ ಗಣ್ಯವ್ಯಕ್ತಿಗಳು ಅವರನ್ನು ಒಂದು ಪ್ರದರ್ಶನದ ಬೊಂಬೆಯಂತೆ, ಮನರಂಜನೆಗೆ ಮಾತ್ರವೇ ಇತರರಿಗೆ ತೋರಿಸುತ್ತಿದ್ದರು. ಹೀಗಾಗಿ ಒಂದುರೀತಿಯ ಹತಾಶೆಯಿಂದಲೇ ಸ್ವಾಮೀಜಿ ಶಿಕಾಗೋ ನಗರವನ್ನು ಬಿಟ್ಟು ಬೋಸ್ಟನ್‌ಗೆ ತೆರಳಬೇಕಾಯಿತು. ಇದಕ್ಕೆ ಕಾರಣ, ಯಾರೋ ಅವರಿಗೆ ಹೇಳಿದ್ದರು, ಬೋಸ್ಟನ್ ನಗರದಲ್ಲಿ ವಾಸಿಸುವ ಖರ್ಚು ಕಡಿಮೆ ಎಂದು.

*(ಮುಂದಿನ ಸಂಚಿಕೆಗೆ)*